# ಹಲ್ಲುಬಿಡಿ ಪ್ಲೀಸ್...



ಬಾಲಕೃಷ್ಣ ಬಾಯಿಬಿಟ್ಟಾಗ ಬ್ರಹ್ಮಾಂಡ ಕಾಣಿಸಿತು. ನಾವು ಹಲ್ಲು ಬಿಟ್ಟರೆ? ಹುಷಾರು, ನಮ್ಮ ಹಲ್ಲುಗಳ ಮೇಲೆ ಹಕ್ಕುಸ್ವಾಮ್ಯ ಸಾಧಿಸಲು ಸಾಕಷ್ಟು ಜನ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

■ ಮಣ್ಣೆ ರಾಜು

ಸ್ಮೈಲ್ ಪ್ಲೀಸ್... ಎಂದು ಫೋಟೋಗ್ರಾಫರ್ ಹೇಳಿದಾಗ ಹಲ್ಲು ಬಿಟ್ಟು ನಿರಾಳವಾಗಿ ನಗಬಹುದು. ಆದರೆ, ದಂತ ವೈದ್ಯರು 'ಸ್ಮೈಲ್ ಪ್ಲೀಸ್' ಎಂದಾಗ ಹುಷಾರು! ದಂತ ವೈದ್ಯರಿಗೆ ಹಲ್ಲು ಕಂಡರೆ ಹಲ್ವಾ ಕಂಡಂತೆ, ಬಾಯಿ ಬಿಚ್ಚಿಸಿ ಹಲ್ಲಿನಲ್ಲಿ ಹುಳುಕು ಹುಡುಕುತ್ತಾರೆ. ಅವಕಾಶ ಕೊಟ್ಟರೆ ಕಿತ್ತುಬಿಡುತ್ತಾರೆ. ಘಟಾನುಘಟಿ ಪೈಲ್ವಾನರ ಹಲ್ಲನ್ನೂ ಬಿಡದೆ ಕಿತ್ತು ಅವರ ಕೈಗೆ ಕೊಡುವಷ್ಟು ಬಲಾಢ್ಯರು ದಂತ ವೈದ್ಯರು!

ಅಗಿಯುವುದು, ಸಿಗಿಯುವುದು, ಅರೆಯುವುದು ಅಷ್ಟೇ ಅಲ್ಲ, ನಮ್ಮ ಅಂದ, ಆನಂದದಲ್ಲಿ ಹಲ್ಲುಗಳ ಪಾಲಿದೆ. ಮುಖದ ಸೌಂದರ್ಯ ವೃದ್ಧಿಗೆ ಯಾವುದೇ ಸೌಂದರ್ಯವರ್ಧಕ ಬೇಕಿಲ್ಲ, ಹೊಳಪಿನ ಹಲ್ಲು, ಮೋಹಕ ಸ್ಮೈಲು ಸಾಕು. ಎದುರಿಗಿದ್ದವರಿಗೆ ಹಲ್ಲು ತೋರಿಸಿ ನಗಬೇಕು. ಬರೀ ಹುಸಿನಗೆ ನಕ್ಕರೆ ಹಲ್ಲು ಉಜ್ಜಿದ್ದಾರೋ ಇಲ್ಲವೋ ಎನ್ನುವ ಅನುಮಾನ ಅವರಿಗೆ ಬರಬಹುದು. ಪ್ರಾಣಿಗಳು ಹಲ್ಲು ಉಜ್ಜುವುದಿಲ್ಲ ಎಂದು ನೆಪ ಹೇಳದೆ ನಿತ್ಯ ಹಲ್ಲು ಸ್ವಚ್ಛ ಮಾಡಿಕೊಂಡು ಮನುಷ್ಯರು ನಾಗರೀಕರಾಗಬೇಕು! ವ್ಯವಹಾರ ಮಾಡುವಾಗ ಹಲ್ಲು ಅರಳಿಸಿ, ಮಲ್ಲಿಗೆಯಂತಹ ಸ್ಮೈಲ್ ಕೊಡಬೇಕು. ಆ ಹೊಳಪಿಗೆ ಅವರು ಶರಣಾಗಿ ವ್ಯವಹಾರ ಕುದುರಬಹುದು. ಉತ್ತಮ ಹಲ್ಲು ಹಾಗೂ ಸ್ಮೈಲು ಬದುಕು–ಬಳಗ ಕಟ್ಟಿಕೊಡುತ್ತವೆ.

ಹಲ್ಲನ್ನು ದುರುಪಯೋಗಪಡಿಸಿಕೊಳ್ಳಬಾರದು. ಕೆಲವರು ಜಗಳದ ವೇಳೆ ಎದುರಾಳಿಯನ್ನು ಕಚ್ಚಿ ಸೋಲಿಸಲು ಹಲ್ಲನ್ನು ಆಯುಧವಾಗಿ ಬಳಸುತ್ತಾರೆ. ಎದುರಾಳಿ ಬಲಿಷ್ಠವಾಗಿದ್ದರೆ ಹಲ್ಲು ಉದುರಿಸುವ ಅಪಾಯವೂ ಇರುತ್ತದೆ. ಕ್ರೂರ ಪ್ರಾಣಿಗಳಂತೆ ಹಲ್ಲನ್ನು ಶತ್ರುಗಳನ್ನು ಸೋಲಿಸಲು, ಕೊಲ್ಲಲು ಬಳಸಬಾರದು ಹಾಗೆ ಮಾಡಲು ಮನುಷ್ಯರಿಗೆ ಕಾನೂನಿನಲ್ಲಿ ಅವಕಾಶವಿಲ್ಲ. ಅದು ಶಿಕ್ಷಾರ್ಹ ಅಪರಾಧ.

ನಮ್ಮ ಹಲ್ಲುಗಳು ನಮ್ಮ ಸ್ವಯಾರ್ಜಿತ ಆಸ್ತಿ. ಅವುಗಳ ಖಾತೆ, ಪಹಣಿ ನಮ್ಮ ಹೆಸರಿನಲ್ಲಿ ಇಲ್ಲದಿದ್ದರೂ ನಾವೇ ಹಕ್ಕುದಾರರು. ಶ್ರೀಮಂತರಿಗೆ ಹೆಚ್ಚು, ಬಡವರಿಗೆ ಕಡಿಮೆ ಎಂಬ ಭೇದವಿಲ್ಲದೆ ಎಣಿಸಿ ಜೋಡಿಸಿದಂತೆ ಎಲ್ಲರಿಗೂ ಮೂವತ್ತೆರಡೇ ಹಲ್ಲು ಇರುತ್ತವೆ. ಕೆಲವರಿಗೆ ಮುತ್ತು ಪೋಣಿಸಿದಂತೆ ದಂತಪಂಕ್ತಿ. ಕೆಲವರ ಹಲ್ಲಿನ ಆಕಾರ ವಿಕಾರ. ಉಬ್ಬು ಹಲ್ಲು, ತಗ್ಗು ಹಲ್ಲು, ಒಂದರಮೇಲೊಂದು ಸವಾರಿ ಮಾಡುವ ರೀತಿಯ ಹಲ್ಲು, ಕೆಲವರ ದಂತಪಂಕ್ತಿ ನಡುವೆ ಇನ್ನೊಂದು ಹಲ್ಲು ಇಡಬಹುದಾದ ಗುಹೆ ಹಲ್ಲು, ಬಾಯಿ ಮುಚ್ಚಿದರೂ ತುಟಿ ದಾಟಿ ಬರುವ